ಅನುಕೂಲಕರ. ಧ್ರುವೀಕರಣಗೊಂಡು ಜಡತ್ವ ಆವರಿಸಿರುವ ಫೇಸ್‌ಬುಕ್‌ನಲ್ಲಿ ಕೆಲವರಾದರು ಬಹಳ ಜಾಗರೂಕತೆಯಿಂದ 'ಪೋಸ್ಟ್' ಮಾಡುವುದನ್ನು ಕಾಣಬಹುದು. ಈ ಫೇಸ್‌ಬುಕ್ ಮಾಧ್ಯಮವನ್ನು ಕಾವ್ಯಮಾಧ್ಯಮವನ್ನಾಗಿಯೂ ಬಳಸಬಹುದು. ಕಥೆಗಾರ ಕೇಶವ ಮಳಗಿಯವರು ತಮ್ಮ ಒಂದು ಕಮೆಂಟಿನಲ್ಲಿ ಹೇಳಿರುವುದು ಹೀಗೆ: ''ಸಾಮಾಜಿಕ ಮಾಧ್ಯಮಗಳ ಸೋಜಿಗವೆಂದರೆ, ಆ ಕ್ಷಣದಲ್ಲಿಯೇ ಓದುಗ ನೇರವಾಗಿ ಲೇಖಕರೊಂದಿಗೆ ಸಂಪರ್ಕ ಸಾಧಿಸಬಹುದಾದುದು ಮತ್ತು ತನ್ನ ಅಭಿಪ್ರಾಯವನ್ನು ಅಲ್ಲಿಯೇ ಹೇಳಬಹುದು. ಪ್ರಕಟಿತ ಪುಸ್ತಕಗಳಿಗೆ ಈ ದತ್ತ ಅವಕಾಶವಿಲ್ಲ. ಅಲ್ಲದೆ, ಲೇಖಕ ಕೂಡ ಇತಿಮಿತಿಯ ಮನುಷ್ಯನಾಗಿರುವದರಿಂದ – ತಿದ್ದುವ, ಇನ್ನಷ್ಟು ನೇರ್ಪುಗೊಳ್ಳುವ ಅವಕಾಶವನ್ನು ನಿರಾಯಾಸವಾಗಿ ಪಡೆದಿರುತ್ತಾನೆ. ಸಾಮಾಜಿಕ ಮಾಧ್ಯಮದ ಈ ದತ್ತ 'ವರ'ವನ್ನು ಬರೆಯುವವರು ಅರಿಯಬೇಕು''.

ಫೇಸ್‌ಬುಕ್ ಮಾಧ್ಯಮದ ಮೂಲಕ ಕವಿಯಾಗಿ ನಾನು ನಡೆಸಿದ ಅನುಸಂಧಾನದ ಕೆಲವು ಕಾವ್ಯಕ್ಷಣಗಳನ್ನು ಹಂಚಿಕೊಳ್ಳುವುದು ಈ ಬರಹದ ಉದ್ದೇಶ.

ಇತ್ತೀಚೆಗೆ ಜಯಶ್ರೀನಿವಾಸ ರಾವ್ ಎನ್ನುವವರು ಫೇಸ್‌ಬುಕ್‌ನಲ್ಲಿ ಬಲ್ಗೇರಿಯಾದ ಕವಿ ಇಕ್ಯಾಟರೀನಾ ಯೋಸಿಫ್‌ಓವಾ ಅವರ ಪುಟ್ಟ ಪದ್ಯವನ್ನು ಅನುವಾದಿಸಿದ್ದರು. ಅದು ಹೀಗಿದೆ:

